1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.5473/2012

ದಿಃ 20.07.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 4

ಚಾಸಾಃ 32

| | |
|---|---|
| ಹೆಸರು | ಃ |
| ತಂದೆಯ ಹೆಸರು | ಃ ಕೃಷ್ಣಪ್ಪ |
| ವಯಸ್ಸು | ಃ 39 ವರ್ಷ |
| ಉದ್ಯೋಗ | ಃ ಖಾಸಗಿ ನೌಕರ |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಗಳು ಗೊತ್ತು, ನಾನು ಟೊಯೋಟಾ ಕಿರ್ಲೊಸ್ಕರ ಕಂಪನಿಯಲ್ಲಿ ಕೆಲಸ ಮಾಡುವ ಸಮಯದಲ್ಲಿ ಆರೋಪಿಗಳ ಪರಿಚಯವಾಗಿದ್ದು, ಆರೋಪಿಗಳು ಬಿಡದಿಯ ಹತ್ತಿರ ಒಂದು ಲೇ ಔಟ್ ಮಾಡುತ್ತೇವೆಂದು ಪ್ರಕಟಿಸಿದ್ದು, ಅದರಂತೆ ಅಲ್ಲಿ ನಾನು ಒಂದು ನಿವೇಶನವನ್ನು ಖರೀದಿ ಮಾಡಲು ತೀರ್ಮಾನಿಸಿದ್ದೆ. ಈ ಸಂಬಂಧವಾಗಿ ಸದರಿ ಸಂಸ್ಥೆಯವರು ಸದರಿ ನಿವೇಶನವನ್ನು ತೋರಿಸಿರುತ್ತಾರೆ. ಸದರಿ ನಿವೇಶನಕ್ಕೆ ಮಾರಾಟ ಬೆಲೆ ನಿಗಧಿ ಮಾಡಿ ಕರಾರು ಪತ್ರ ಮಾಡಿಸಿಕೊಳ್ಳಲು ಬರುವಂತೆ ನನಗೆ ತಿಳಿಸಿರುತ್ತಾರೆ. ಅದರಂತೆ ದಿಃ 18.08.2007 ರಂದು ಕರಾರು ಮಾಡಿಕೊಂಡು ಮುಂಗಡ ಹಣವಾಗಿ 3 ಲಕ್ಷ ರೂ ಹಣವನ್ನು ಸದರಿ ಸಂಸ್ಥೆಯವರಿಗೆ ಪಾವತಿ ಮಾಡಿದ್ದೇನೆ. ಸದರಿ ಹಣಕ್ಕೆ ಸಂಸ್ಥೆಯವರು ರಸೀದಿಯನ್ನು ಕೊಟ್ಟಿರುತ್ತಾರೆ. ಒಂದು ಪಕ್ಷ ನಿವೇಶನ ಬೇಡವಾದರೆ ಬಡ್ಡಿ ಸಹಿತ ಮುಂಗಡ ಹಣವನ್ನು ವಾಪಸ್ ಕೊಡುತ್ತೇವೆಂದು ತಿಳಿಸಿರುತ್ತಾರೆ. ಆ ನಂತರ ಒಂದು ವರ್ಷದ ನಂತರ ಸದರಿ ಸಂಸ್ಥೆಯ ಕಚೇರಿಗೆ ಭೇಟಿ ಕೊಡಲು ಹೋದಾಗ

ಅಲ್ಲಿ ಯಾರು ಇರಲಿಲ್ಲ. ಆದ್ದರಿಂದ ಸದರಿ ಸಂಸ್ಥೆಯವರು ನನಗೆ ಯಾವುದೇ ನಿವೇಶನವನ್ನಾಗಲೀ, ಕೊಟ್ಟಂತಹ ಹಣವನ್ನಾಗಲೀ ಕೊಟ್ಟಿರುವುದಿಲ್ಲ. ಈ ರೀತಿ ಸದರಿ ಸಂಸ್ಥೆಯವರು ನನಗೆ ಮೋಸ ಮಾಡಿರುತ್ತಾರೆ. ಆ ನಂತರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿದ್ದೇನೆ. ನನಗೆ ಹಾಗೂ ಸದರಿ ಸಂಸ್ಥೆಯವರಿಗೆ ಆದಂತಹ ಕರಾರು ಪತ್ರವನ್ನು ನಿಪಿ.3 ಎಂದು, ರಸೀದಿಯನ್ನು ನಿಪಿ.4 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸ್‌ನವರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ದಿನ 5 ಹಾಗೂ 10 ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಿದ್ದು, ಅವರನ್ನು ನೋಡಿರುವುದಿಲ್ಲ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅವರು ಗೈರುಹಾಜರಿದ್ದು, ಅವರ ಪರ ವಕೀಲರು ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲು: 18 ಹಾಗೂ 19 ನೇ ಆರೋಪಿಗಳ ಪರ ಶ್ರೀ ಪಿಜೆ ವಕೀಲರಿಂದ:-</u>

ಮೇಲೆ ಹೇಳಿದ ಹಾಗೆ ಸದರಿ ನಿವೇಶನವನ್ನು ಸಂಸ್ಥೆಯ ನೌಕರರಾದ ಕಿರಣ್ ಎಂಬುವರು ನಮಗೆ ತೋರಿಸಿರುತ್ತಾರೆ. ನಾನು ಮುಂಗಡ ಹಣವನ್ನು ಸಂಸ್ಥೆಯ ಹೆಸರಿಗೆ ಚೆಕ್‌ನ್ನು ನೀಡಿರುತ್ತೇನೆ. ಸದರಿ ಸಂಸ್ಥೆಯ ಮಾಲಿಕರು ಭಾಸ್ಕರ್ ರೆಡ್ಡಿ ಎಂದು ತಿಳಿದಿರುತ್ತದೆ. ಸದರಿ ಭಾಸ್ಕರ್ ರೆಡ್ಡಿ ಹೊರತುಪಡಿಸಿ ಬೇರೆಯವರ ಜೊತೆ ನಾನು ಯಾವುದೇ ವ್ಯವಹಾರ ಮಾಡಿರುವುದಿಲ್ಲ.

<u>ಪಾಟೀ ಸವಾಲು:</u> 3, 7, 10, 11, 12, 13 ನೇ ಆರೋಪಿಗಳ ಪರ ವಕೀಲರು ಮೇಲಿನ ಪಾಟಿ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

<u>ಪಾಟೀ ಸವಾಲು: 2ನೇ ಆರೋಪಿ ಪರ ಶ್ರೀ ಕೆಎನ್‌ಎಸ್ ವಕೀಲರಿಂದ:-</u>

ಮೇಲೆ ತಿಳಿಸಿದ ಸಂಸ್ಥೆಯವರು ಲೇ ಔಟ್ ಮಾಡಿ ನಿವೇಶನಗಳನ್ನು ಮಾರಾಟ ಮಾಡುವ ಬಗ್ಗೆ ದಿನಪತ್ರಿಕೆಗಳಲ್ಲಿ ನೋಡಿ ತಿಳಿದುಕೊಂಡಿದ್ದೇನೆ. ನಾನು ಸದರಿ ಲೇ ಔಟ್ ಜಮೀನಿಗೆ ಹೋದಾಗ ಯಾವುದೇ ನಿವೇಶನಗಳನ್ನು ಮಾಡಿರಲಿಲ್ಲ. ಸದರಿ ಜಮೀನಿನಲ್ಲಿ ಒಂದು ವರ್ಷದ ಒಳಗಾಗಿ ಲೇ ಮಾಡಿ ನಿವೇಶನಗಳನ್ನು ಮಾರಾಟ ಮಾಡುತ್ತೇವೆಂದು ಸದರಿ ಸಂಸ್ಥೆಯವರು ಹೇಳಿರುತ್ತಾರೆ. ಸದರಿ ಜಮೀನಿನ ಸಂಬಂಧವಾಗಿ ಯಾವುದೇ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 2007 ರಲ್ಲಿ ಸರ್ಕಾರದವರು ಬೆಂಗಳೂರಿನ ಸುತ್ತ ಮುತ್ತಲಿನ ಜಮೀನಿನಲ್ಲಿ ಲೇ ಔಟ್‌ಗಳನ್ನು ಮಾಡದಂತೆ ತಡೆಹಿಡಿದಿದ್ದಾರೆಂದರೆ ಸರಿ. ಸದರಿ ಜಮೀನಿನ ಬಗ್ಗೆ 1ನೇ ಆರೋಪಿ ಲೇ ಔಟ್ ಪ್ಲ್ಯಾನ್ ಕೊಟ್ಟಿರುತ್ತಾರೆ, ಆದರೆ ಬೇರೆ ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ಆ ನಂತರ ಸದರಿ ಸಂಸ್ಥೆಯವರು ಜಮೀನಿನ ಬಗ್ಗೆ ದಾಖಲೆಗಳನ್ನು ಕೊಡುವಂತೆ ಕೇಳಿದಾಗ ಕ್ರಯ ಪತ್ರದ ನೊಂದಣಿ ಸಮಯದಲ್ಲಿ ಕೊಡುತ್ತೇವೆಂದು ತಿಳಿಸಿರುತ್ತಾರೆ. ಸದರಿ ಕರಾರು ಪತ್ರದಲ್ಲಿ ಸರ್ಕಾರದಿಂದ ಅನುಮತಿ ಪಡೆದ ನಂತರ ಒಂದು ವರ್ಷದ ಒಳಗಾಗಿ ಕ್ರಯ ಪತ್ರ ಬರೆದುಕೊಡುವುದಾಗಿ ಕಂಡೀಶನ್ ಇದೆ ಎಂದರೆ ಸರಿಯಲ್ಲ. ಸದರಿ ಅವಧಿಯ ಬಗ್ಗೆ ಕರಾರು ಪತ್ರದಲ್ಲಿ ತಿಳಿಸಿರುವುದಿಲ್ಲವೆಂದರೆ ಸರಿಯಲ್ಲ. 2ನೇ ಆರೋಪಿ ಯಾವುದೇ ಆರೋಪ ಮಾಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು:</u> 1ನೇ ಆರೋಪಿ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡು ಮುಂದುವರೆದು ಪಾಟಿ ಸವಾಲನ್ನು ಮಾಡಿರುತ್ತಾರೆ.

1ನೇ ಆರೋಪಿ ಸದರಿ ಸಂಸ್ಥೆಗೆ ಆತ ಒಬ್ಬರೇ ಮಾಲೀಕರೆಂದು ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ, ಆದರೆ ಕರಾರು ಪತ್ರಕ್ಕೆ ಸಹಿ ಮಾಡಿದ್ದಾರೆ. ನಿಪಿ.4 ಕ್ಕೆ

ಸದರಿ ಸಂಸ್ಥೆಯ ಸಂಬಂಧಪಟ್ಟ ನೌಕರರು ಸಹಿ ಮಾಡಿದ್ದಾರೆ, 1ನೇ ಆರೋಪಿ ಸಹಿ ಮಾಡಿಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ